

# ‘ಕೆಳಗಿನ ತೋಟ’ದಲ್ಲಿ ಗುಬ್ಬಚ್ಚಿಧಾಮಗಳು



**‘ಕೆಳಗಿನ ತೋಟ’ ಚಿಕ್ಕಬಳ್ಳಾಪುರದ ಪ್ರತಿಷ್ಠಿತ ಬಡಾವಣೆಗಳಲ್ಲೊಂದು. ಇಲ್ಲಿನ ಮನೆಗಳು ಜನರಿಗಷ್ಟೇ ನೆಲೆಯಾಗಿಲ್ಲ; ಗುಬ್ಬಚ್ಚಿಗಳಿಗೂ ಆಸರೆ.**

**■ ಡಿ.ಎಂ. ಕುರ್ಕೆ ಪ್ರಶಾಂತ್**

ಒಂದು ದಿನ ಮಧ್ಯಾಹ್ನ ಮನೆಯೊಳಗೆ ಗುಬ್ಬಿಗಳು ಹಿಂಡುಹಿಂಡಾಗಿ ಬಂದವು. ತಾರಸಿಗೆ ತೂಗು ಬಿದ್ದಿದ್ದ ಫ್ಯಾನ್ ಮೇಲೆ ಕುಳಿತವು. ಅಡುಗೆ ಮನೆ ಹೊಕ್ಕವು. ಮನೆಯೊಳಗೆ ಅಲ್ಲಿಂದಿಲ್ಲಿಗೆ ಇಲ್ಲಿಂದಲ್ಲಿಗೆ ಹಾರುತ್ತ ಚಿಂವ್ ಚಿಂವ್... ಚಿಂವ್... ಎಂದು ಸದ್ದು ಮಾಡತೊಡಗಿದವು. ಮನೆಯವರಿಗೆ ಏನನ್ನೋ ಹೇಳುವ ಪ್ರಯತ್ನ ಅವುಗಳ ಸದ್ದಿನಲ್ಲಿದ್ದಂತಿತ್ತು.

‘ನಮ್ಮ ಮನೆಯ ಗುಬ್ಬಿ’ಗಳ ವರ್ತನೆಯನ್ನು ಮೂರು ವರ್ಷಗಳಿಂದ ಹತ್ತಿರದಿಂದ ಬಲ್ಲ ಕಾರಣ ‘ಏನೋ ಸಮಸ್ಯೆಯಾಗಿದೆ’ ಎನ್ನುವುದು ಅರ್ಥವಾಯಿತು.

ಆಗಾಗ್ಗೆ ಮನೆಯೊಳಗೆ ಇಣುಕಿ, ಒಂದು ಸುತ್ತು ಹಾಕಿ ಸುಮ್ಮನೆ ಹೋಗುವ ಗುಬ್ಬಿಗಳು, ತೀವ್ರವಾಗಿ ಚೀರಿದರೆ, ಚಿಂವ್ ಚಿಂವ್ ಎನ್ನುತ್ತ ಪದೇ ಪದೇ ಮನೆಯೊಳಗೆ ಬರುವುದು ಹೊರಹೋಗುವುದು ಮಾಡಿದರೆ, ತೀರಾ ಸಮೀಪಕ್ಕೆ ಬಂದು ಚೀರಿದರೆ, ‘ನಮಗೆ ತೊಂದರೆ ಆಗಿದೆ’ ಎನ್ನುವುದರ ಸೂಚನೆಯದು.

ಮನೆಯಿಂದ ಹೊರ ಬಂದೆ. ಊಹೆ ನಿಜವಾಗಿತ್ತು. ಹಲವು ವರ್ಷಗಳಿಂದ ಮನೆಯ ಸಜ್ಜಾದಲ್ಲಿ ರಟ್ಟಿನ ಬಾಕ್ಸ್‌ನೊಳಗೆ ಕಸಕಡ್ಡಿಯಿಂದ ಹೆಣೆದಿದ್ದ ಗೂಡು ನೆಲಕ್ಕೆ ಬಿದ್ದಿತ್ತು. ಗೂಡನ್ನೇ ದುರುಗುಟ್ಟಿಕೊಂಡು ನೋಡುತ್ತ ಮನೆಯ ಕಾಂಪೌಂಡ್ ಮೇಲೆ ಮಂಗವೊಂದು ಕುಳಿತಿತ್ತು. ಗೂಡಿನಿಂದ ಅನತಿ ದೂರದಲ್ಲಿ ನೆಲಕ್ಕೆ ಬಿದ್ದಿದ್ದ ರೆಕ್ಕೆ ಬಲಿಯದ ಗುಬ್ಬಿಯನ್ನು ಗೂಡಿನ ಒಳಗೆ ಇಟ್ಟು ಮತ್ತೆ ಸಜ್ಜಾಕ್ಕೆ ಸೇರಿಸಿದೆ. ಕೋತಿಯನ್ನು ಓಡಿಸಿದೆ.

ಎಲ್ಲವೂ ಸರಿ ಆಯಿತು ಎಂದು ಮನೆಯೊಳಗೆ ಬಂದರೆ, ಜೋಡಿ ಗುಬ್ಬಿಗಳು ಹಿಂಬಾಲಿಸಿದ್ದವು. ಮತ್ತದೇ ಆತಂಕದ ಧ್ವನಿ. ಅರ್ಧ ಗಂಟೆಯಾದರೂ ಮನೆಯಿಂದ ಕದಲಲಿಲ್ಲ. ಮತ್ತೆ ಹೊರ ಹೋಗಿ ನೋಡಿದರೆ ಗೂಡು ಸಜ್ಜಾದಲ್ಲಿಯೇ ಇದೆ. ಅವುಗಳ ಆತಂಕಕ್ಕೆ ಕಾರಣವೇನು ಎಂದು ಅರ್ಥವಾಗದ ಕಾರಣ ಸುಮ್ಮನಾದೆ. ಸ್ವಲ್ಪ ಸಮಯದ ತರುವಾಯ ಮನೆಯೊಳಗೆ ಪಟಪಟ ರೆಕ್ಕೆ ಬಡಿಯುವ ಸದ್ದು. ಹುಡುಕಿ ತಡಕಿದ ನಂತರ, ಕರ್ಟನ್ ಮರೆಯಲ್ಲಿದ್ದ ರೆಕ್ಕೆ ಬಲಿಯದ ಮರಿ ಗುಬ್ಬಿ ಕಾಣಿಸಿತು.

ಮಂಗವು ಕೆಡವಿದ ಗುಬ್ಬಿ ಗೂಡಿನಲ್ಲಿ ರೆಕ್ಕೆ ಬಲಿಯದ ಎರಡು ಮರಿಗಳಿದ್ದವು. ಆ ಪೈಕಿ ಒಂದು ನೆಲಕ್ಕೆ ಬಿದ್ದಿದ್ದರೆ, ಮತ್ತೊಂದು ಮರಿ ಗೂಡಿನ ಕೆಳಭಾಗದ ಕಿಟಕಿಯ ಮೂಲಕ ಮನೆಯೊಳಗೆ ಪ್ರವೇಶಿಸಿದೆ. ಆ ಕಿಟಕಿಯ ಕರ್ಟನ್‌ನಲ್ಲಿ ಭಯದಿಂದ ಅವಿತಿದೆ. ಜೋಡಿ ಗುಬ್ಬಿಗಳ ರೋದನಕ್ಕೆ ಮನೆಯೊಳಕ್ಕೆ ಬಂದಿದ್ದ ಮರಿಗುಬ್ಬಿಯೇ ಕಾರಣ ಎನ್ನುವುದು ತಿಳಿಯಿತು.

ಚಿಕ್ಕಬಳ್ಳಾಪುರ ನಗರದ ‘ಕೆಳಗಿನ ತೋಟ’ದ (ಎಚ್.ಎಸ್. ಗಾರ್ಡನ್) ಬಹಳಷ್ಟು ವಾಸಿಗಳಿಗೆ ಗುಬ್ಬಚ್ಚಿಗಳಿಗೆ ಸಂಬಂಧಿಸಿದಂತೆ ಇಂಥ ಒಂದಲ್ಲಾ ಒಂದು ಅನುಭವಗಳು ಸಾಮಾನ್ಯ.

ಕೆಳಗಿನ ತೋಟದ ಬಡಾವಣೆಗಳನ್ನು ಸುತ್ತಿದರೆ ಬಹುತೇಕ ಮನೆಗಳ ಚಾವಣಿಗಳಲ್ಲಿ, ಸಜ್ಜಾಗಳಲ್ಲಿ, ಎತ್ತರವಾದ ಕಿಟಕಿಗಳಲ್ಲಿ, ಕಾರಿನ ಶೆಡ್‌ಗಳಲ್ಲಿ, ವರಾಂಡಗಳಲ್ಲಿ ಗುಬ್ಬಿಗೂಡು ಕಂಡುಬರುತ್ತದೆ. ಬಹಳಷ್ಟು ಮನೆಗಳ ಬಳಿ ಜನರು ಗುಬ್ಬಿಗಳಿಗಾಗಿಯೇ ಗೂಡು ಇಟ್ಟಿದ್ದಾರೆ. ಆ ಮನೆಗಳ ಜನರನ್ನು ಮಾತಿಗೆ ಎಳೆದರೆ ಗುಬ್ಬಿಗಳ ಬಗೆಗಿನ ಪ್ರೀತಿ, ಕರುಣೆ ಇಣುಕುತ್ತದೆ.

ಕೆಳಗಿನ ತೋಟ ಈ ಹಿಂದೆ ತೆಂಗು, ದ್ರಾಕ್ಷಿ ತೋಟಗಳ ಸಾಲೇ ಆಗಿತ್ತು. ಈಗ ತೋಟಗಳ ಜಾಗಗಳಲ್ಲಿ ಬೃಹತ್ ಕಟ್ಟಡಗಳು, ಮನೆಗಳು ತಲೆ ಎತ್ತುತ್ತಿವೆ. ತೋಟಗಳು ತೆರವಾಗಿ ‘ಪಾಪಣ್ಣ ಲೇಔಟ್’, ‘ಟೀಚರ್ಸ್ ಕಾಲೊನಿ’, ‘ವಿನಾಯಕ ಬಡಾವಣೆ’, ‘ವಾಲ್ಮೀಕಿ ನಗರ’, ‘ಕನಕ ನಗರ’ – ಹೀಗೆ ಹಲವು ಬಡಾವಣೆಗಳು ನಿರ್ಮಾಣವಾಗಿವೆ. ಪರಿಸರ ಆಧುನಿಕಗೊಂಡಿದ್ದರೂ ಗುಬ್ಬಿಗಳ ಸಂತತಿ ಕಣ್ಮರೆಯಾಗಲು ಬಿಡದಿರುವ ಸಂಕಲ್ಪ ಜನರದು. ತಮ್ಮ ಮನೆಗಳ ಬಳಿ ಗೂಡುಗಳನ್ನು ಕಟ್ಟುವ ಮೂಲಕ ಗುಬ್ಬಚ್ಚಿಗಳಿಗೆ ಆಸರೆಯಾಗಿದ್ದಾರೆ.



